

# ಕೆಂಪು ಸರೋವರ

ಈ ಸರೋವರದ ನೀರಿನ ಬಣ್ಣ ಕಡುಗೆಂಪು. ಯಾರಾದರೂ ಕೆಂಪು ಶಾಯಿಯನ್ನು ಚೆಲ್ಲಿದ್ದಾರೋ ಅಥವಾ ರಕ್ತವನ್ನು ಸುರಿಸಿದ್ದಾರೆನೋ ಎನ್ನುವಂತೆ ತೋರುವ ಈ ಸರೋವರ ಸಮುದ್ರ ಮಟ್ಟಕ್ಕಿಂತ 3700 ಅಡಿಗಳಷ್ಟು ಮೇಲೆ ಇದ್ದು ಎಲ್ಲರನ್ನೂ ಅಚ್ಚರಿಗೊಳಿಸಿದೆ. ಇದು ಇರುವುದು ಉತ್ತರ ಚಿಲಿ ದೇಶದ ಕ್ಯಾಮಿನಾ ನಗರದಲ್ಲಿ.

ಈ ಸರೋವರವಿರುವ ಬಗ್ಗೆ ಸ್ಥಳೀಯರಿಗೆ ತಿಳಿದಿತ್ತಾದರೂ ಅವರು ಈ ವಿಷಯವನ್ನು ಬಹಳ ಗೌಪ್ಯವಾಗಿಟ್ಟಿದ್ದರು. 2009 ರ ತನಕ ಇಲ್ಲಿನ ಪ್ರವಾಸೋದ್ಯಮ ಇಲಾಖೆಗೂ ಈ ಸರೋವರದ ಬಗ್ಗೆ ಏನೇನೂ ಮಾಹಿತಿಯಿರಲಿಲ್ಲ.

ಚಾರಿತ್ರಿಕವಾಗಿ ಆಯ್ಮುರಾ ಸಂಸ್ಕೃತಿಯ ಜನಾಂಗದವರಿಂದ ಹಾಗೂ ಪ್ರಾಚೀನ ನಾಗರಿಕತೆಯಿಂದಾಗಿ ಈ ಪ್ರದೇಶವು ಪ್ರಸಿದ್ಧಿಗೊಂಡಿದ್ದರೂ ಇವರೆಲ್ಲ ಈ ಸರೋವರದ ಕುರಿತಾದ ದಂತಕಥೆಗಳನ್ನು ಹಾಗೂ ಗುಟ್ಟನ್ನು ಬಹಿರಂಗಗೊಳಿಸಿರಲಿಲ್ಲ. ಇದು ಈಗಷ್ಟೇ ಬಯಲಾಗಿದೆ. ಯಾವ ರೀತಿ ಈಜಿಪ್ಟ್‌ನ ಸಮಾಧಿಗಳಲ್ಲಿ ವಿಚಿತ್ರ ಶಾಪವಿದೆಯೋ ಅದೇ ರೀತಿ ಈ ಸರೋವರಕ್ಕೂ ಶಾಪ ಅಂಟಿಕೊಂಡಿದೆ. ಇದರ ನೀರನ್ನು ಯಾರು ಮುಟ್ಟುತ್ತಾರೋ ಅವರು ಖಂಡಿತಾ ತೊಂದರೆಗೀಡಾಗುತ್ತಾರೆಂಬ ಪ್ರತೀತಿ ಇದೆ. ಆದುದರಿಂದಲೇ ಕೆಂಪು ಸರೋವರದ ಬಗ್ಗೆ ಯಾರಿಗೂ ತಿಳಿದಿರಲಿಲ್ಲ ಹಾಗೂ ಭೂಪಟದಲ್ಲಿಯೂ ಸಹ ಕಾಣಿಸಿರಲಿಲ್ಲ.

ಇದರ ನೀರನ್ನು ಕುಡಿದಿರುವುದರಿಂದಲೇ ಸಾವಿರಾರು ಆಯ್ಮುರಾ ಜನರು ಕಣ್ಮರೆಯಾಗಿದ್ದಾರೆಂದು ಸ್ಥಳೀಯರು ಹೇಳುತ್ತಾರೆ. ಹಳದಿ ಹಾಗೂ ಹಸಿರು ಬಣ್ಣದ ನೀರು ಇರುವ ಕೊಳಗಳು ಕೆಂಪು ಸರೋವರವನ್ನು ಆವರಿಸಿವೆ ಹಾಗೂ ಕೆಟ್ಟ ಮನುಷ್ಯರು ಇದರ ಸುತ್ತಲೂ ನಿಂತಿದ್ದರೆ ನೀರಿನಲ್ಲಿ ಗುಳ್ಳೆಗಳು ಏಳುತ್ತವೆ ಎಂದು ಹೇಳಲಾಗುತ್ತದೆ. ಆದುದರಿಂದಲೇ ಈ ಕೊಳಗಳೆಲ್ಲಾ ರಾಕ್ಷಸರ ಒಡೆತನದಲ್ಲಿದೆ ಎಂದು ಇಲ್ಲಿನ ಜನ ನಂಬಿದ್ದಾರೆ. ತಜ್ಞರ ಪ್ರಕಾರ ಸರೋವರದ ಬಣ್ಣಕ್ಕೆ ಕೆಳಭಾಗದಲ್ಲಿರುವ ಪಾಚಿ ಕಾರಣ.

**■ ವಿದ್ಯಾ ವಿ. ಹಾಲಭಾವಿ**

